ದಿನಾಂಕಃ 06.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ : ಶ್ರೀ ಎನ್ ಕೆ ಎಸ್ ವಕೀಲರಿಂದಃ

1. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಾನು ಕಾನೂನು ಸಲಹೆಯನ್ನು ಪಡೆದಿದ್ದು, ನನಗೆ ಸದರಿ ವಕೀಲರ ಹೆಸರು ನೆನಪಿಲ್ಲ. ಸಾಕ್ಷಿ ಪುನಃ ನಾನು ಶ್ರೀರಂಗಪಟ್ಟಣದ ಪುಟ್ಟೇಗೌಡ ವಕೀಲರಿಂದ ಸಲಹೆ ಪಡೆದಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಕಾನೂನು ಸಲಹೆ ಪಡೆದಿರುವುದಿಲ್ಲ ಹಾಗೂ ಯಾವುದೇ ಕಾನೂನು ಸಲಹಾ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಾನು ಸರಸ್ವತಿ ಅವರಿಗೆ ಆದ ಕ್ರಯ ಪತ್ರ ಮತ್ತು ಸರಸ್ವತಿ ಅವರು ತಮ್ಮ ಪತಿ ನೀಡಿದ ಜಿ ಪಿ ಎ ಅನ್ನು ಪಡೆದುಕೊಂಡಿರುತ್ತೇನೆ. ನಾನು ಸರಸ್ವತಿ ಅವರ ವಂಶವೃಕ್ಷವನ್ನು ಪಡೆದಿದ್ದು ವಾದಿಯ ವಂಶವೃಕ್ಷವನ್ನು ಪಡೆದಿರುವುದಿಲ್ಲ. ದಾವಾ ಆಸ್ತಿಯನ್ನು ಸರಸ್ವತಿಯವರ ಕುಟುಂಬದವರಿಗೆ ಮಾರಾಟ ಮಾಡಿರುತ್ತಾರೆ. ವಾದಿ ಕ್ರಯ ಪತ್ರಕ್ಕೆ ಸಹಿ ಮಾಡಿದ್ದಾರಾ ಎಂದರೆ ಸಾಕ್ಷಿ ಇಲ್ಲ, ಆದರೆ ಜಿ ಪಿ ಎ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ವಾದಿಯು ಜಿ ಪಿ ಎ ಅನ್ನು ತನ್ನ ಸಹೋದರರ ಮತ್ತು ಕುಟುಂಬಕ್ಕೆ ನೀಡಿರುತ್ತಾರೆ. ಜಿ ಪಿ ಎ ನೋಂದಣಿಯಾಗಿದೆಯಾ ಅಥವಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. ಜಿ ಪಿ ಎ ಅನ್ನು ವಾದಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಜಿ ಪಿ ಎ ಅನ್ನು 4 ನೇ ಪ್ರತಿವಾದಿ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿಯು 6 ನೇ ಪ್ರತಿವಾದಿಗೆ ಬರೆದುಕೊಟ್ಟ ಜಿ ಪಿ ಎ ಅಲ್ಲಿ ವಾದಿ ಸಹಿ ಮಾಡಿರುತ್ತಾರೆ. ದಿಃ 05.01.2007 ರಂದು ಅದ ಜಿ ಪಿ ಎ ಗೆ ವಾದಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸ್ಟಾರ್ ಆಫ್ ಮೈಸೂರು ಮತ್ತು ಮೈಸೂರು ಮಿತ್ರ 2 ಪತ್ರಿಕೆಯಲ್ಲಿ ಪ್ರಕಟಣೆ ನೀಡಿರುತ್ತೇನೆ. ಸದರಿ ದಾಖಲಾತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿರುತ್ತೇನೆ ನಾನು ಯಾವುದೇ ಪತ್ರಿಕೆ ಪ್ರಕಟಣೆಯನ್ನು

ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

2. ವಾದಿ ಎಲ್ಲಿ ವಾಸವಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ ತುಮಕೂರು ಜಿಲ್ಲೆಯ, ಕುಣಿಗಲ್ ತಾಲೂಕಿನ ಕೊರಟಗೆರೆ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸ್ಟಾರ್ ಆಫ್ ಮೈಸೂರು ಮತ್ತು ಮೈಸೂರು ಮಿತ್ರ ತುಮಕೂರು ಜಿಲ್ಲೆ ಮತ್ತು ಕುಣಿಗಲ್ ತಾಲೂಕಿಗೆ ವಿತರಣೆಯಾಗುವುದಿಲ್ಲ ಎಂದರೆ ಸಾಕ್ಷಿ ಸರಸ್ವತಿ ಅವರು ಮೈಸೂರಿನಲ್ಲಿ ಇರುವುದು ಅ ಕಾರಣಕ್ಕೆ ಸದರಿ ಪತ್ರಿಕೆಗಳಲ್ಲಿ ಪ್ರಕಟಣೆ ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾದಿ ಒಪ್ಪಿಗೆ ಪತ್ರವನ್ನು ನೀಡಿರುವುದಾಗಿ ತಿಳಿಸಿದ್ದು, ಅದನ್ನು ನ್ಯಾಯಾಲಯದಲ್ಲಿ ಹಾಜರಪಡಿಸಿರುತ್ತೇನೆ. ಆ ರೀತಿ ಯಾವುದೇ ಒಪ್ಪಿಗೆ ಪತ್ರವನ್ನು ವಾದಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಒಪ್ಪಿಗೆ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ZACHARIOS VARIKAMAKIL ಅವರ ವಾರಸುದಾರರನ್ನು ಈ ದಾವೆಯಿಂದ ತೆಗೆದುಹಾಕಿರುವುದು ಸರಿಯಿಲ್ಲ ಎಂದು ನುಡಿದಿದ್ದು, ವಾದಿಯು ಅವರೊಂದಿಗೆ ರಾಜಿ ಮಾಡಿಕೊಂಡ ಕಾರಣ ಅವರನ್ನು ಈ ದಾವೆಯಿಂದ ತೆಗೆಯಲಾಗಿದೆ ಎಂದರೆ ಸಾಕ್ಷಿ ಅದು ಸರಿಯಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಸರಸ್ವತಿ ಅವರಿಗೆ ಆದ ಮೂಲ ಕ್ರಯ ಪತ್ರ ಮತ್ತು ಸರಸ್ವತಿ ಅವರು ನೀಡಿದ ಜಿ ಪಿ ಎ ಅನ್ನು ಹಾಜರುಪಡಿಸಿರುತ್ತೇನೆ. ನಾನು ಸರಸ್ವತಿ ಅವರಿಗೆ ಆದ ಮೂಲ ಕ್ರಯ ಪತ್ರ ಮತ್ತು ಸರಸ್ವತಿ ಅವರು ನೀಡಿದ ಜಿ ಪಿ ಎ ಅನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಯಾವುದೇ ಜಿ ಪಿ ಎ ಯನ್ನು ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಯಾವುದೇ ಜಿ ಪಿ ಎ ಗೆ ಪಕ್ಷಗಾರರಲ್ಲ ಹಾಗೂ ನನ್ನ ಮಾಲೀಕರಿಗೆ ಆದ ಕ್ರಯ ಪತ್ರದಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ 1/5 ಭಾಗ ಇರುವುದು ನನಗೆ ತಿಳಿದಿದ್ದರೂ ಸಹ ಅವರಿಗೆ ಮೋಸ ಮಾಡಬೇಕೆಂಬ ದುರುದ್ದೇಶದಿಂದ ನಾನು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಪಡೆಯಬೇಕೆಂಬ ದುರುದ್ದೇಶದಿಂದ ನನ್ನ ಅನುಕೂಲಕ್ಕೆ ತಕ್ಕಂತೆ ದಾಖಲಾತಿಗಳನ್ನು ಸೃಷ್ಟಿಸಿ ಅವುಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ